ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

C.E.S.C. MYSORE

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2023-24/ 948-131 ದಿನಾಂಕ: 08 JAN 2024

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ: 20.12.2023 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಸೋಮಶೇಖರ.ಎಂ.ಕೆ : ಅಧೀಕ್ಷಕ ಇಂಜಿನಿಯರ್ (ವಿ), ಚಾ.ನಗರ –ಕೊಡಗು ವೃತ್ತ ಮೈಸೂರು
2. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
3. ಶ್ರೀ.ಶಿವನಗೌಡ ಅ ಪಾಟೀಲ : ಸಹಾಯಕ ಇಂಜಿನಿಯರ್(ವಿ), ವಿರಾಜಪೇಟೆ.
4. ಶ್ರೀ.ಸೋಮೇಶ್.ಕೆ.ವಿ : ಪ್ರಭಾರ ಸಹಾಯಕ ಇಂಜಿನಿಯರ್(ತಾ), ವಿರಾಜಪೇಟೆ
5. ಶ್ರೀ.ಕೆ.ಎಸ್.ಸ್ವರಾಗ್ : ಕಿರಿಯ ಇಂಜಿನಿಯರ್(ತಾ),ಸೆಸ್ಕ್, ಸಿದ್ದಾಪುರ.
7. ಶ್ರೀ.ಹೆಚ್.ಜಿ.ಮನುಕುಮಾರ್ : ಪ್ರಭಾರ ಕಿರಿಯ ಇಂಜಿನಿಯರ್(ತಾ), ಸೆಸ್ಕ್, ಅಮ್ಮತ್ತಿ.
8. ಶ್ರೀ.ಸಿ.ಬಿ.ದೇವಯ್ಯ : ಪ್ರಭಾರ ಕಿರಿಯ ಇಂಜಿನಿಯರ್(ತಾ), ಸೆಸ್ಕ್, ಪಾಲಿಬೆಟ್ಟ.
9. ಶ್ರೀ.ವಿ.ಪಿ.ಜಗದೀಶ್ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ಸೆಸ್ಕ್, ವಿರಾಜಪೇಟೆ.

ಅದೀಕ್ಷಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನ ಸಂಪರ್ಕ ಸಭೆ ಆಯೋಜಿಸಿ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆದ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರ ಸಂ | ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ.ಪೂಣಚ್ಚ<br>ವಿ.ಬಾಡಗ ಗ್ರಾಮ<br>ದೂ: 9448634371 | • ಬಿಟ್ಟಂಗಾಲ ಗ್ರಾಮವನ್ನು ಪ್ರತ್ಯೇಕ ಶಾಖೆ ಮಾಡುವಂತೆ ಹಲವು ಸಲ ಕೇಳಿಕೊಂಡರು ಈವರಗೆ ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ಪೂಣಚ್ಚ ರವರು ಬೇಸರ ವ್ಯಕ್ತಪಡಿಸಿ, ಬಿಟ್ಟಂಗಾಲ ಪಂಚಾಯ್ತಿ ಮತ್ತು ಬಿ.ಶೆಟ್ಟಿಗೇರಿ ಪಂಚಾಯ್ತಿ ಗ್ರಾಮಗಳ ವ್ಯಾಪ್ತಿಯು ಅತೀ ವಿಸ್ತಾರವಾಗಿದ್ದು ಸುಮಾರು 28 ಕಿ.ಮೀ ಗೂ ಹೆಚ್ಚು ದೂರವಿರುತ್ತದೆ ಆದುದರಿಂದ ಪ್ರತ್ಯೇಕ ಶಾಖೆಯನ್ನು ಮಾಡುವಂತೆ ಕೋರಿದರು.<br>• ಸದರಿ ವ್ಯಾಪ್ತಿಗೆ ಕೇವಲ ಒಬ್ಬ ಮಾರ್ಗದಾಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು ಹೆಚ್ಚಿನ ಮಾರ್ಗದಾಳುಗಳನ್ನು ನಿಯೋಜಿಸುವಂತೆ ಕೋರಿದರು. | • ಅಧೀಕ್ಷಕ ಇಂಜಿನೀಯರ್ ರವರು ನಿಗಮದ ನಿಯಮಾನುಸಾರ ಈಗಾಗಲೇ ಪ್ರತ್ಯೇಕ ಶಾಖೆಗೆ ಪ್ರಸ್ತಾವನೆಯನ್ನು ಸುಮಾರು 5 ವರ್ಷಗಳ ಹಿಂದೆಯೇ ಸಲ್ಲಿಸಲಾಗಿರುತ್ತದೆ, ಅಲ್ಲದೆ ಸದರಿ ಪ್ರತ್ಯೇಕ ಶಾಖೆಯ ಮಂಜೂರಾತಿ ಮೇಲಧಿಕಾರಿಗಳ ಪರಿಮಿತಿಗೆ ಬರುವುದರಿಂದ ಸದರಿ ವಿಷಯನ್ನು ಮೇಲಧಿಕಾರಿಗಳಿಗೆ ಪತ್ರ ಬರೆಯುವುದಾಗಿ ತಿಳಿಸಿದರು.<br>* ಸದರಿ ವ್ಯಾಪ್ತಿಯಲ್ಲಿ ಈ ಹಿಂದೆ ಮೂರು ಜನ ಮಾರ್ಗದಾಳು ಕಾರ್ಯ ನಿರ್ವಹಿಸುತ್ತಿದ್ದು ಒಬ್ಬರು ವಿದ್ಯುತ್ ಅಪಘಾತದಿಂದ ಮೃತಪಟ್ಟಿದ್ದು ಇನ್ನೊಬ್ಬರ ಆರೋಗ್ಯ ಸಮಸ್ಯೆಯಿರುವುದರಿಂದ ಒಬ್ಬರೇ ಕಾರ್ಯ ನಿರ್ವಹಿಸುತ್ತಿದ್ದು ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಮೇಲಧಿಕಾರಿಗಳಿಗೆ ತಿಳಿಸುವುದಾಗಿ ತಿಳಿಸಿದರು. |

| | | | |
|---|---|---|---|
| | | • ರೈತರಿಗೆ ಕೃಷಿ ಚಟುವಟಿಕೆಗಳಿಗೆ ನಿಗಮದಿಂದ (ತ್ವರಿತ ಯೋಜನೆಯಡಿ) ದೊರೆಯುತ್ತಿದ್ದ ಪರಿವರ್ತಕವನ್ನು ಸ್ಥಗಿತಗೊಳಿಸಿದ್ದು ಪುನರಾರಂಭಗೊಳಿಸುವಂತೆ ಕೋರಿದರು. | • ಅಧೀಕ್ಷಕ ಇಂಜಿನೀಯರ್ ರವರು ಸದರಿ ವಿಷಯವನ್ನು ಮೇಲಧಿಕಾರಿಗಳ ಗಮನಕ್ಕೆ ತರುವುದಾಗಿ ತಿಳಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| 2 | ಶ್ರೀ.ಎಂ.ಬಿ.ರಾಜೇಶ್<br>ವಿಜಯನಗರ, ವಿರಾಜಪೇಟೆ<br>ದೂ.9448346154 | • ವಿರಾಜಪೇಟೆ ನಗರದ ವಿಜಯನಗರ ವ್ಯಾಪ್ತಿಯ ಸದರಿಯವರ ಮನೆಯ ಕಡೆಗೆ ಸುಮಾರು 20 ಕಂಬಗಳಿದ್ದು ಸದರಿ ಕಂಬಗಳ ವಯರ್‌ಗಳು ಆಗಾಗ್ಗೆ ತುಂಡಾಗಿ ಬೀಳುತ್ತಿದ್ದು ಶಾಲಾ ಮಕ್ಕಳು ಹಾಗೂ ಸಾರ್ವಜನಿಕರಿಗೆ ವಿದ್ಯುತ್ ಅಪಘಾತಗಳುಂಟಾಗುವ ಸಾಧ್ಯತೆಯಿರುವುದರಿಂದ ಕವರ್ಡ್ ಕಂಡಕ್ಟರ್ ವಾಹಕ ಅಳವಡಿಸಿಕೊಡುವಂತೆ ಕೋರಿದರು.<br>• ಮೈತಾಡಿ ಗ್ರಾಮ ವ್ಯಾಪ್ತಿಯಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಹಾಲಿ ಅಪ್ಪಾರಂಡ ಪರಿವರ್ತಕದ ಪಕ್ಕದಲ್ಲಿ ಮತ್ತೊಂದು ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು. | • ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವಂತೆ ವಿರಾಜಪೇಟೆ ಶಾಖಾಧಿಕಾರಿಗಳಿಗೆ ಸೂಚಿಸಿರು.<br>• ಅಧೀಕ್ಷಕ ಇಂಜಿನೀಯರ್ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಹೆಚ್ಚುವರಿ ಪರಿವರ್ತಕಕ್ಕೆ ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರು. |
| 3 | ಶ್ರೀ.ಅಪ್ಪಣ್ಣ, ಜೀವನ್ ಬೆಳ್ಳಿಯಪ್ಪ ಮತ್ತು .ಕುಪ್ಪಂಡ ಕಾರ್ಯಪ್ಪ ಕದನೂರು ಗ್ರಾಮ<br>ದೂ.9449399610, 9900500456 | • ಕೊಡಗು ಜಿಲ್ಲೆಯ 10.00 ಅ.ಶ ಗಿಂತ ಕೆಳಗಿನ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸುವಂತೆ ಕೋರಿದರು.<br>• ಸದರಿ ಡಿ.ಬಿ.ಟಿ ಯೋಜನೆಯ ಮೂಲಕ ಯಾವುದೇ ಕಾರಣಕ್ಕೂ ಪಾವತಿಸುವುದಿಲ್ಲ ಸಂಪೂರ್ಣವಾಗಿ ಉಚಿತವಾಗಿ ವಿದ್ಯುತ್ ಒದಗಿಸುವಂತೆ ಆಗ್ರಹಿಸಿದರು. | • ಅಧೀಕ್ಷಕ ಇಂಜಿನೀಯರ್ ರವರು ಸಂಭಂಧ ಪಟ್ಟ ರೈತರು ಅಗತ್ಯ ದಾಖಲೆಗಳನ್ನು ಕಂದಾಯ ಶಾಖೆಗೆ ನೀಡಿ ನಿಗಧಿತ ಸಮಯದಲ್ಲಿ ಬಿಲ್ಲಿನ ಮೊತ್ತವನ್ನು ಪಾವತಿಸಿದಲ್ಲಿ ಡಿ.ಬಿ.ಟಿ ಮುಖಾಂತರ ರೈತರಿಗೆ ಹಣವನ್ನು ಹಿಂಪಾವತಿಸುವುದಾಗಿ ಸರ್ಕಾರವು ತಿಳಿಸಿದ್ದು, ರೈತರು ಸದರಿ ಡಿ.ಬಿ.ಟಿ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.<br>• ಅಧೀಕ್ಷಕ ಇಂಜಿನೀಯರ್ ರವರು ಸದರಿ ಉಚಿತ ವಿದ್ಯುತ್ ನೀಡುವ ಪರಿಮಿತಿ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ಈ ಬಗ್ಗೆ ಮೇಲಧಿಕಾರಿಗಳಿಗೆ ತಿಳಿಸುವುದಾಗಿ ತಿಳಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ಸುರೇಶ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ನಿಗಮದ ವತಿಯಿಂದ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

8/1

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ವಿರಾಜಪೇಟೆ ರವರಿಗೆ ಮಾಹಿತಿಗಾಗಿ
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಇತ್ಯಾರ್ಥ ಪಡಿಸಲು ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.